## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 15

ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 10.07.2018

ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಲಾದ ಅರ್ಕಾವತಿ ಬಡಾವಣೆಯಲ್ಲಿ ಇಲ್ಲಿಯವರೆವಿಗೂ ಹಂಚಿಕೆಯಾಗಿ ಸ್ವಾಧೀನ ಪತ್ರ ನೀಡಿದ್ದರೂ, ಸ್ಥಳ ಗುರುತಿಸಲಾಗದಿರುವುದರಿಂದ ಪಲಾನುಭವಿಗಳಿಗೆ ಗೊಂದಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರವು ಈ ಪಲಾನುಭವಿಗಳ ಗೊಂದಲವನ್ನು ಸರಿಪಡಿಸಲು ಸರ್ವೆ ಕಾರ್ಯವನ್ನು ಕೈಗೊಂಡಿದೆಯೇ; (ಪೂರ್ಣ ವಿವರ ನೀಡುವುದು) | ಹೌದು. ಅರ್ಕಾವತಿ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ ಹಲವಾರು ಪ್ರಕರಣಗಳು ಮಾನ್ಯ ನ್ಯಾಯಾಲಯಗಳಲ್ಲಿ ದಾಖಲಾಗಿದ್ದು, ಈ ಹಂತದಲ್ಲಿ ಕೆಲವು ಭೂಮಾಲೀಕರು ತಮ್ಮ ಜಮೀನುಗಳಲ್ಲಿ ಪ್ರಾಧಿಕಾರದಿಂದ ರಚಿಸಲಾದ ನಿವೇಶನಗಳ ಮೂಲ ರಚನೆಯ ಸ್ವರೂಪವನ್ನು ಬದಲಾಯಿಸಿರುವುದರಿಂದ ಹಾಗೂ ಕೆಲವು ಜಮೀನುಗಳಲ್ಲಿ ಪೊದೆಗಳು ಬೆಳೆದಿರುವುದರಿಂದ ನಿವೇಶನಗಳನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ.<br><br>ಪ್ರಸ್ತುತ ಬಡಾವಣೆ ಅಭಿವೃದ್ಧಿ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪೂರ್ಣಗೊಂಡ ನಂತರ ಸಮರ್ಪಕವಾಗಿ ಬಡಾವಣೆ ನಕ್ಷೆಯಂತೆ ನಿವೇಶನಗಳನ್ನು ಗುರುತಿಸಲಾಗುತ್ತದೆ. |
| ಆ) | ಈ ಬಡಾವಣೆಯಲ್ಲಿನ 19 ನೇ ಬ್ಲಾಕ್ ನಲ್ಲಿ ಹಂಚಿಕೆ ಮಾಡಲಾಗಿರುವ ನಿವೇಶನವಾರು ನಕಾಶೆಯನ್ನು ಹಾಗೂ ಮೂಲ ಸೌಲಭ್ಯಗಳ ಸಂಪೂರ್ಣ ವಿವರ ನೀಡುವುದು; ಈ ನಿರ್ಮಾಣ ಕಾರ್ಯಕ್ಕಾಗಿ ಮಾಡಲಾಗಿರುವ ವೆಚ್ಚದ ವಿವರ ನೀಡುವುದು? | ಅರ್ಕಾವತಿ ಬಡಾವಣೆಯ 19ನೇ ಬ್ಲಾಕ್ ನಲ್ಲಿ ಹಂಚಿಕೆ ಮಾಡಲಾಗಿರುವ ನಿವೇಶನವಾರು ನಕಾಶೆಯನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ಬ್ಲಾಕ್‌ನಲ್ಲಿ ಮೂಲ ಸೌಲಭ್ಯಗಳನ್ನು ಒದಗಿಸಿರುವ ವಿವರಗಳು ಕೆಳಕಂಡಂತಿರುತ್ತವೆ:-<br><br>1) ಅರ್ಕಾವತಿ 19ನೇ ಬ್ಲಾಕ್‌ನಲ್ಲಿ ಸಿವಿಲ್ ಕಾಮಗಾರಿಗೆ ರೂ.15.60ಕೋಟಿಗಳ ಅಂದಾಜುಪಟ್ಟಿ ಅನುಮೋದನೆ ಯಾಗಿದ್ದು, ರಸ್ತೆಗಳಿಗೆ ಜಲ್ಲಿ ಬಿಚಾವಣೆ, ಆರ್.ಸಿ.ಸಿ. ಚರಂಡಿ, ಮೋರಿ ಮತ್ತು ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಸದರಿ ಬ್ಲಾಕ್‌ಗೆ ಇಲ್ಲಿಯವರೆವಿಗೂ 13.84 ಕೋಟಿಗಳಷ್ಟು ವೆಚ್ಚವಾಗಿರುತ್ತದೆ.<br><br>2) ಅರ್ಕಾವತಿ ಬಡಾವಣೆಯ ಎಲ್ಲಾ ಬ್ಲಾಕ್ ಗಳಿಗೆ (19ನೇ ಬ್ಲಾಕ್ ಒಳಗೊಂಡಂತೆ) ವಿದ್ಯುತ್ ಸಂಪರ್ಕ ನೀಡಲು 66/11 KV ವಿದ್ಯುತ್ ಉಪಕೇಂದ್ರ, ವಿದ್ಯುತ್ ಮಾರ್ಗಗಳ ನಿರ್ಮಾಣ ಮತ್ತು ಬೀದಿ ದೀಪಗಳ ಅಳವಡಿಕೆ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ದಿನಾಂಕ: 19.05.2018 ರಂದು ಮೆ॥ ರಾಮಲಿಂಗಂ ಕನ್ಸ್ ಟ್ರಕ್ಷನ್ಸ್ ರವರಿಗೆ ರೂ.245.42 ಕೋಟಿಗಳಿಗೆ ಕಾರ್ಯದೇಶವನ್ನು ನೀಡಲಾಗಿದ್ದು, ಕಾಮಗಾರಿ ಪ್ರಾರಂಭಿಸಿ ಪ್ರಗತಿಯಲ್ಲಿರುತ್ತದೆ.<br><br>ಕುಡಿಯುವ ನೀರಿನ ಸಂಪರ್ಕ ಮತ್ತು ಒಳಚರಂಡಿ ಕಾಮಗಾರಿ ಕಲ್ಪಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರಿಗೆ ಪ್ರಾಧಿಕಾರದಿಂದ ರೂ.25.00 ಲಕ್ಷ ರೂಗಳ ಠೇವಣಿಯನ್ನು ಪಾವತಿಸಲಾಗಿರುತ್ತದೆ. |

ಸಂಖ್ಯೆ: ನಅಇ 385 ಬೆಂಭೂಸ್ವಾ 2018

(ಡಾ. ಜಿ ಪರಮೇಶ್ವರ)
ಉಪ ಮುಖ್ಯಮಂತ್ರಿ